**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆಃ 2351/2023**

**ಸಿ.ಡಬ್ಲೂ: 3 ಪಿ.ಡಬ್ಲೂಃ 2**

**ಪ್ರಮಾಣೀಕರಿಸಿದ ದಿನಾಂಕಃ21-02-2026**

| | |
|---|---|
| ಹೆಸರು | ಶ್ರೀನಾಥ್ |
| ತಂದೆಯ ಹೆಸರು | ಬ್ರಹ್ಮಾನಂದರೆಡ್ಡಿ |
| ವಯಸ್ಸು | **31 ವರ್ಷ** |
| ವೃತ್ತಿ | ಬೆಮೆಲ್ ಗುತ್ತಿಗೆ ನೌಕರರು |
| ವಾಸ | ಜ್ಯರಸನಕುಪ್ಪ ಗ್ರಾಮ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

1. ಚಾಸಾ 1 ನನ್ನ ತಂದೆ. ಚಾಸಾ2 ನನ್ನ ತಾಯಿ. ಚಾಸಾ4 ನನ್ನ ಹೆಂಡತಿ. ಚಾಸಾ5 ಮತ್ತು 6 ನನಗೆ ಗೊತ್ತು. ಈ ಪ್ರಕರಣದ ಆರೋಪಿತರು ನನಗೆ ಗೊತ್ತು.

2. ದಿಃ 26.03.2023 ರಂದು ನಾನು ಮತ್ತು ನನ್ನ ಹೆಂಡತಿ ಆದ ಚಾಸಾ4 ರವರು ಕಲವಂಚಿ ಗ್ರಾಮಕ್ಕೆ ಹೋಗಿದ್ದುಆ ದಿನ ಬಾನುವಾರವಾಗಿತ್ತು. ನನ್ನ ತಾಯಿಯವರಿಗೆ ಇಬ್ಬರು ಅಕ್ಕಂದಿರಿದ್ದು ಅವರ ತಂದೆಯವರಿಂದ ಅವರಿಗೆ ಕೆಲವುಆಸ್ತಿಗಳು ಬಂದಿರುತ್ತದೆ. ಸದರಿ ಆಸ್ತಿಗಳಲ್ಲಿ 33 ಗುಂಟೆಯನ್ನು ನನ್ನ ದೊಡ್ಡಮ್ಮನಾದ 5 ನೇ ಆರೋಪಿಯು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ. ಅವರಿಂದ ಸದರಿ 33 ಗುಂಟೆಯನ್ನು 2 ನೇ ಆರೋಪಿಯು ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ಆದರೆ ನಾನು ಹುಟ್ಟಿದಂದಿನಿಂದ ಅದೇ ಆಸ್ತಿಯಲ್ಲಿ ವಾಸ ಮಾಡುತ್ತಿದ್ದೆವು. ಈ ವಿಚಾರಕ್ಕೆ ಸಂಬಂದ ಪಟ್ಟಂತೆ ನನ್ನ ತಂದೆ ಆದ ಚಾಸಾ1 ರವರು 3 ನೇ ಆರೋಪಿ ಬಳಿ ಆಸ್ತಿಯ ಪಾಲಿನ ಬಗ್ಗೆ ವಿಚಾಸಿದ್ದು ಅದಕ್ಕೆ ಅವರು ಮಾಡಿಕೊಡುತ್ತೇವೆ ಎಂದು ಹೇಳಿರುತ್ತಾರೆ.

3. ನಂತರ ಅದೇ ದಿನ ರಾತ್ರಿ 8.00 ಗಂಟೆಗಹೆ ನಾನು ಮತ್ತು ನನ್ನ ಹೆಂಡತಿ ಕೂಡ ಮನೆಯಲ್ಲಿದ್ದಾಗ ಹಾಗೂ ಚಾಸಾ1 ಮತ್ತು 2 ರವರು ಮನೆಯಲ್ಲಿದ್ದಾಗ ಆರೋಪಿತರೆಲ್ಲರೂ ಗುಂಪು ಕಟ್ಟಿಕೊಂಡು ಬಂದು ನಮಗೆ ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ನಮ್ಮ ಜೊತೆ ಜಗಳ ತೆಗೆದು ಅದರಲ್ಲಿ 1 ನೇ ಆರೋೕಪಿಯುು ಆಸ್ತಿಗಳ ವಿಚಾರಕ್ಕೆ ಸಂಬಂದ ಪಟ್ಟಂತೆ ಕೇಳಿಕೊಂಡು ನಮ್ಮ ಮನೆಯ ಬಳಿ ಬರಬಾರದು ಎಂದು ಹೇಳಿದಾಗ ನನ್ನ ತಂದೆ ಆದ ಚಾಸಾ1 ರವರು ಅದರಲ್ಲಿ ನಮಗೂ ಹಕ್ಕು ಇದೆ ಎಂದು ಹೇಳಿದ್ದು ಆಗ 1 ನೇ ಆರೋಪಿಯು ಚಾಕುವಿನಿಂದ ಚಾಸಾ1 ರವರಿಗೆ ಹೊಡೆದು ನೋವುಂಟು ಮಾಡಿರುತ್ತಾರೆ. ಆಗ ನಾನು ಚಾಸಾ1 ರವರನ್ನು ರಕ್ಷಿಸುವ ಸಲುವಾಗಿ ಹೋದಾಗ 2 ನೇ ಆರೋಪಿಯು ನನ್ನ ತಲೆ ಮೇಲೆ, ಎದೆ ಮೇಲೆ ಗುದ್ದಿ ನೋವುಂಟು ಮಾಡಿರುತ್ತಾರೆ. ನಂತರ ಸದರಿ ಜಗಳವನ್ನು ಚಾಸಾ5 ಮತ್ತು 6 ರವರು ಬಿಡಿಸಿ ನಮ್ಮನ್ನು ಸರ್ಕಾರಿ ಆಸ್ಪತ್ರೆ ಕೆಜಿಎಫ್ ಗೆ ಕರೆದುಕೊಂಡು ಹೋಗಿರುತ್ತಾರೆ. ಈ ಎಲ್ಲಾ ವಿಚಾರಕ್ಕೆ ಸಂಬಂದ ಪಟ್ಟಂತೆ ಪೋಲೀಸರಿಗೆ ಹೇಳಿಕೆ ನೀರುತ್ತೇನೆ. ಆ ದಿನ 1 ನೇ ಆರೋಪಿಯು

ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಚಾಕು ಅದೇ ಆಗಿದೆ ಅದನ್ನು ಈಗಾಗಲೇ ಎಂ ಒ 1 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಗಾಯಾಳು ಮತ್ತು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತನ್ನ ಹೇಳಿಕೆಯ ಕೆಲವು ಅಂಶಗಳಿಗೆ ವಿರುದ್ದವಾಗಿ ಹೇಳುವ ಕಾರಣ ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-</u>**

4. ಸರ್ವೆ ನಂ.144/8 ರಲ್ಲಿ 33 ಗುಂಟೆ ಜಮೀನು, ಶೆಡ್ ಮತ್ತು ಸರ್ವೆ ನಂ.144/6 ರಲ್ಲಿ ಮನೆ ಮತ್ತು ನಿವೇಶನ ನನ್ನ ತಾಯಿ ಆದ ಚಾಸಾ2 ರವರಿಗೆ ಅವರ ತಂದೆ ತಾಯಿ ಇಂದ 3/1 ಭಾಗದಂತೆ ಕೊಟ್ಟಿದ್ದು ಅದರಲ್ಲಿ ನಾವು ಸ್ವಾದೀನ ಇದ್ದರೂ ಸಹ 3 ನೇ ಆರೋಪಿಯು 5 ನೇ ಆರೋಪಿ ಹೆಸರಿಗೆ ಪಹಣಿ ಮತ್ತು ಖಾತೆ ಮಾಡಿಸಿಕೊಂಡಿದ್ದು ಈ ವಿಚಾರಕ್ಕೆ ಸಂಬಂದಪಟ್ಟಂತೆ ಹಲವಾರು ಬಾರಿ ನಮ್ಮ ನಡುವೆ ರಾಜಿ ಪಂಚಾಯಿತಿ ನಡೆದಿರುತ್ತದೆ ಮತ್ತು ಆ ವಿಚಾರಕ್ಕೆ ಸಂಬಂದ ಪಟ್ಟಂತೆ ಆಗಾಗ ಗಲಾಟೆ ಆಗುವ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ಗಲಾಟೆ ಸಮಯದಲ್ಲಿ 1 ನೇ ಆರೋಪಿಯು ಚಾಕುನಿಂದ ನನ್ನ ತಂದೆ ಆದ ಚಾಸಾ1 ರವರ ಎರಡು ಕೈ ತೋಳುಗಳ ಮೇಲೆ ಹೊಡೆದು ರಕ್ತಗಾಯವನ್ನುಂಟು ಮಾಡಿರುತ್ತಾರೆ ಮತ್ತು 2 ನೇ ಆರೊಪಿಯು ನನ್ನ ತಂದೆ ಆದ ಚಾಸಾ1 ರವರಿಗೆ ಕೈಗಳಿಂದ ಹೊಡೆದು ಕಾಲುಗಳಿಂದ ಒದ್ದಿರುತ್ತಾರೆ ಎಂದರೆ ಸರಿ. ಉಳಿದ ಆರೋಪಿತರು ಚಾಸಾ1 ರವರಿಗೆ ಕೈಗಳಿಂದ ಕೂಡ ಹೊಡೆದಿರುತ್ತಾರೆ ಎಂದೆ ಸರಿ .

_ **ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**